ಶ್ರೀ ಜಿ. ಎಸ್. ದೇಶಮುಖ್.—ಪರಿಶೀಲನೆ ಮಾಡುತ್ತೇನೆ.

ಬಿಜಾಪುರ ಜಿಲ್ಲೆಯಲ್ಲಿ ಅಬಕಾರಿಯಿಂದ ಸಂದಾಯವಾದ ಪರಮಾನ

೧೦೯೮. ಶ್ರೀ ಜಿ. ಎಸ್. ಬಾಗಲಕೋಟೆ (ಜಮಖಂಡಿ).—ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೇ ?

ಅ) ೧೯೮೪-೮೫ ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ರಾಜ್ಯಕ್ಕೆ ವಿಜಾಪುರ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಿಂದ ಸಂದಾಯವಾದ ಪರಮಾನವೆಷ್ಟು ?

ಶ್ರೀ ರಮೇಶ ಜಿಗ ಜಿಣಗಿ (ಅಬ್ಕಾರಿ ರಾಜ್ಯ ಮಂತ್ರಿಗಳು).—

ಅ) ವಿವರಗಳನ್ನು ಅನುಬಂಧ I ರಲ್ಲಿ ಕೊಡಲಾಗಿದೆ.

ANNEXURE—I

S. No.	Taluk	Excise Revenue collected for 1984-85.
1.	Bijapur	1, 66, 59, 117-53
2.	Indi	27, 79, 614-15
3.	Sindagi	13. 97, 892-69
4.	Bagalkot	18, 21, 605-83
5.	Badami	15, 90, 751-90
6.	Hungund	66, 00, 735-94
7.	Mudhol	51, 32, 561-00
8.	Bilgi	14 77, 62 -03
9.	Jamakhandi	6, 71, 16, 210-50
10.	Muddebihal	25, 41, 913-40
11.	Bagewadi	20, 41, 167-03
	Total	11, 01, 59, 192-00

ಶ್ರೀ ಜಿ. ಎಸ್. ಬಾಗಲಕೋಟೆ.—ಮಾನ್ಯ ಉಪಾಧ್ಯಕ್ಷರೇ, ಇಡೀ ಜಿಲ್ಲೆಯಲ್ಲಿ ೬, ೭೧ ೦೬, ೨೧೨-೫೦ ಪೈಸೆ ಆದಾಯ ಇದ್ದು ನನ್ನ ತಾಲ್ಲೂಕು ಹೆಚ್ಚು ಉತ್ಪನ್ನ ಕೊಡುತ್ತಿದೆ. ಆ ತಾಲ್ಲೂಕಿನ ಅಭಿವೃದ್ಧಿಗಾಗಿ ಸರ್ಕಾರದವರು ಯೋಜನೆಗಳನ್ನು ಕೈಗೊಳ್ಳುವಂಥಾದ್ದು ಇದೆಯೆ ?

ಶ್ರೀ ರಮೇಶ. ಸಿ. ಜಿಗಜಿಣಗಿ.—ಮಾನ್ಯ ಸದಸ್ಯರ ಪ್ರಶ್ನೆ ನನ್ನ ಖಾತೆಯ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕಳೆದ ಬಾರಿ ಎಷ್ಟು ಆದಾಯ ಬಂದಿತ್ತು ? ಈ ಸಾರಿ ಕಳೆದಬಾರಿಗಿಂತ ಕಡಿಮೆಯಾಗಿದೆಯೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಈ ಪ್ರಶ್ನೆ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಯವರು ಈ ರೀತಿ ಪಾತನಾಡುವುದು ಸರಿಯಲ್ಲ ಸದನದಲ್ಲಿ ಪ್ರಶ್ನೆಗಳು ಬಂದಾಗ ಆನೇಕ ಉಪ ಪ್ರಶ್ನೆಗಳನ್ನು ಕೇಳುತ್ತಾರೆಂದು ತಿಳಿದುಕೊಂಡು ಬರಬೇಕಾಗು

ತ್ತದೆ. ನಾವು ಫಿಗರ್ಸ್ ಕೇಳಿಲ್ಲ. ಕಳೆದ ಸಾರಿಗಿಂತ ಎಷ್ಟು ಕಡಿಮೆಯಾಗಿದೆ. ಅಥವಾ ಜಾಸ್ತಿಯಾಗಿದೆಯೇ ಎಂದು ಕೇಳಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಇದೇ ಸದನದಲ್ಲಿ ಆಯವ್ಯಯದ ಚರ್ಚೆ ಬಂದಾಗ. ಎಷ್ಟು ಆದಾಯ ಹೆಚ್ಚು ಬಂದಿದೆ ಎನ್ನುವ ವಿವರ ಕೊಟ್ಟಿದ್ದೇನೆ. ಈ ಸಾರಿ ಸರ್ಕಾರಕ್ಕೆ ೪೭ ಕೋಟಿಗಿಂತ ಹೆಚ್ಚು ಆದಾಯ ಬಂದಿದೆ. ಜಿಲ್ಲಾವಾರು ವಿವರ ಇಲ್ಲ. ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟೆ.—ಉತ್ಪಾದನೆ ಹೆಚ್ಚಾಗುವ ದೃಷ್ಟಿಯಿಂದ ಮತ್ತು ನವ ತಾಲ್ಲೂಕಿನ ರೈತರಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುವ ದೃಷ್ಟಿಯಿಂದ ಸೇಂದಿ ಮಂರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಸುವುದಕ್ಕೆ ಇಲಾಖೆಯವರು ಏನಾದರು ರೈತರಿಗೆ ಸಬ್ಸಿಡಿ ವಗೈರೆ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆಯೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಬಹಳ ಮಹತ್ವವಾದುದು. ಅಲ್ಲಿ ಸೇಂದಿ ಮರಗಳನ್ನು ಬೆಳೆಸುವುದಕ್ಕೆ ನಮ್ಮ ಇಲಾಖೆಯ ವತಿಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಅವುಗಳನ್ನು ಹಾಕಿಕೊಳಲಾಗುವುದು.

ಶ್ರೀ ಕೆ. ಎಚ್. ಪಾಟೀಲ್.—ಅಲ್ಲಿ ನೇಕಾರರು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ, ಅವರ ಜೀವನ ಪರಿಶುದ್ಧವಾಗಿ ಇರಬೇಕೆಂಬ ಉದ್ದೇಶದಿಂದ ಆ ಭಾಗದಲ್ಲಿ ಪಾನನಿರೋಧ ಕಾಯಿದೆಯನ್ನು ಜಾರಿಗೆ ತರುತ್ತೀರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆ.—ಇಡೀ ಜಿಲ್ಲೆಯಲ್ಲಿ ಜಮಖಂಡಿ ತಾಲ್ಲೂಕನ್ನು ಬಿಟ್ಟರೆ ಎರಡನೆ ಸ್ಥಾನದಲ್ಲಿ ಬಾಗಲ್‌ಕೋಟೆ ತಾಲ್ಲೂಕಿನಲ್ಲಿ ಹೆಚ್ಚಿನ ಕನ್ಸಮ್‌ಷನ್ ಆಗಿ ಹೆಚ್ಚಿನ ಆದಾಯ ಸರ್ಕಾರಕ್ಕೆ ಬರುತ್ತದೆಂದು ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಬಾಗೆವಾಡಿ ಕಡಿಮೆ ಆಗತ ಕಾಣುತ್ತದೆ. ಆ ರೀತಿ ಹೆಚ್ಚು ಕನ್ಸಮ್‌ಷನ್ ಆಗುವುದಕ್ಕೆ ಕಾರಣವೇನೆಂಬುದನ್ನು ಸ್ಪಷ್ಟವಾಗಿ ಹೇಳುತ್ತೀರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಅದಕ್ಕೆ ಕಾರಣ ಏನು ಎಂಬುದಕ್ಕೆ ನನ್ನ ಹತ್ತಿರ ಉತ್ತರ ಇಲ್ಲ.

ಉಪಾಧ್ಯಕ್ಷರು.—ಪ್ರಶ್ನೆ ನಂ. ೧೫೪೬ಕ್ಕೆ ಉತ್ತರ ಬಾರದೇ ಇರುವುದರಿಂದ, ತಡೆ ಹಿಡಿಯಲಾಗಿದೆ.

ಉಪಾಧ್ಯಕ್ಷರು.—ಪ್ರಶ್ನೆ ನಂ. ೧೧೦೧ ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರ್ ಮಾಮನಿಯವರು ಹಾಜರಿಲ್ಲ.

ಉಪಾಧ್ಯಕ್ಷರು.—ಪ್ರಶ್ನೆ ನಂ. ೧೨೨೨ ಮಾನ್ಯ ಸದಸ್ಯರಾದ ಶ್ರೀ ವೀರಯ್ಯ ಸ್ವಾಮಿಯವರು ಹಾಜರಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಬರಗಾಲ ಪರಿಹಾರದ ಕಾಮಗಾರಿಗಳು.

೧೨೭೯. ಶ್ರೀ ಗೋಪಾಲ ಮುಕ್ರಂದ ಕಾನಡೆ (ಶಿರಸಿ).—ಮಾನ್ಯ ಕಂದಾಯ ಹಾಗೂ ಸೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಗೆ ಮಂಜೂರಾದ ಬರಗಾಲ ಪರಿಹಾರ ಹಣದ ಮೊತ್ತವೆಷ್ಟು ?

ಆ) ಆ ಪೈಕಿ ಸಿದ್ದಾಪುರ, ಶಿರಸಿಗೆ ನೀಡಲಾದ ಹಣದ ಮೊತ್ತವೆಷ್ಟು ?

ಇ) ಶಿರಸಿ–ಸಿದ್ದಾಪುರ ತಾಲ್ಲೂಕನ್ನು ಬರಗಾಲ ಪೀಡಿತ ತಾಲ್ಲೂಕ್ಕಾಗಿ ಪರಿಗಣಿಸಲು ಸರ್ಕಾರ ನವರಿಗೆ ಇರುವ ತೊಂದರೆಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ೧೦.೮೦ ಲಕ್ಷ ರೂಪಾಯಿಗಳು.